


# ಜ್ಯೂ ಟೌನ್ ಎಂಬ ಟೈಂ ಕ್ಯಾಪ್ಸೂಲ್!

**ಪೋರ್ಚುಗೀಸರು, ಡಚ್ಚರು, ಯಹೂದಿಗಳಿಂದ ಹಿಡಿದು ಬ್ರಿಟಿಷರು, ಟಿಪ್ಪು ಸುಲ್ತಾನ್‌ನವರೆಗೂ ಕೊಚಿನ್ ಸಂಘರ್ಷದ ನೆಲವಾಗಿತ್ತು. 'ಯೂರೋಪಿನ ರಣರಂಗ' ಎಂದು ಬಣ್ಣಿಸಲಾಗುವ ಈ ನಗರದ ಚರಿತ್ರೆಯ ಪಿಸುಮಾತುಗಳನ್ನು ಆಲಿಸಲು ಹಾಗೂ ಸಾಂಸ್ಕೃತಿಕ ಸೊಗಡನ್ನು ಕಣ್ತುಂಬಿಕೊಳ್ಳಲು ಜ್ಯೂ ಟೌನ್‌ಗೆ ಬರಬೇಕು.**

■ **ಆನಂದತೀರ್ಥ ಪ್ಯಾಟಿ**

ಕಡಲ ತೀರದ ವೈಭವೋಪೇತ ಈ ನಗರಿಗೆ ಸರಿಸಾಟಿಯಿಲ್ಲ. ಕಣ್ಣು ಕೋರೈಸುವ ದೀಪಗಳಿಂದ ಝಗಮಗಿಸುವ ಕಟ್ಟಡಗಳು ಹೊಸ ಪಟ್ಟಣದಲ್ಲಿ ಕಂಡರೆ, ಹಳೇ ನಗರಕ್ಕಿನ್ನೂ ವಸಾಹತುಶಾಹಿ ಛಾಯೆ. ನೂರಾರು ವರ್ಷಗಳ ನೆನಪುಗಳನ್ನು ಒಡಲಲ್ಲಿ ಹೊತ್ತು ನಿಂತ ಕಟ್ಟಡ–ಮನೆಗಳ ನೋಟವೇ ಬಲು ಚೆಂದ. ಇಕ್ಕಟ್ಟಾದ ರಸ್ತೆಗಳಾದರೂ ಅತಿ ಎನಿಸುವಷ್ಟು ನುಣುಪು. ಇನ್ನೇನು ಡಿಕ್ಕಿ ಹೊಡೆದೇಬಿಟ್ಟಿತು ಎಂಬಷ್ಟರ ಮಟ್ಟಿಗೆ ಒಂದಕ್ಕೊಂದು ಅಂಟಿಕೊಂಡಂತೆ ವಾಹನ ಓಡಿಸುತ್ತ ಸೇತುವೆ ಮೂಲಕ ಹೊಸ ಕೊಚಿನ್ ದಾಟಿದರೆ, ಬಂದೇ ಬಿಟ್ಟಿತು 'ಫೋರ್ಟ್ ಕೊಚ್ಚಿ'!

ನಾಸ್ಟಾಲ್ಜಿಕ್ ಅನುಭೂತಿ ನೀಡುವ ಕಟ್ಟಡಗಳು, ಬೃಹದಾಕಾರದ ಚರ್ಚುಗಳು, ಸಾಗರ ದಡದಲ್ಲಿ ಸಾಲುಗಟ್ಟಿ ನಿಂತ ದೋಣಿಗಳು. 'ಹಳತು ಹೊನ್ನು' ಎಂಬ ಮಾತಿಗೆ ಪುರಾವೆಯೆನಿಸುವ ಕಡಲ ತಡಿಯ ಕೊಚಿನ್ ಪಟ್ಟಣವು ಭಾರತೀಯರಿಗಷ್ಟೇ ಅಲ್ಲ; ಯಹೂದ್ಯರಿಗೂ (ಜ್ಯೂ ಸಮುದಾಯ) ನೆಚ್ಚಿನ ತಾಣ. ಅವರ ಸಂಸ್ಕೃತಿಯ ಬೇರುಗಳು ಸಾವಿರ ವರ್ಷಕ್ಕಿಂತಲೂ ಹೆಚ್ಚಿನ ಕಾಲದಿಂದ ಆಳವಾಗಿ ಇಲ್ಲಿ ಬೇರೂರಿವೆ.

ಅತ್ತ ಕಾಸ್ಮೊಪಾಲಿಟನ್ ಸಂಸ್ಕೃತಿಯನ್ನೂ ಇತ್ತ ಸಾವಿರ ವರ್ಷಗಳ ಸಮೃದ್ಧ ಇತಿಹಾಸವನ್ನೂ ಏಕಕಾಲಕ್ಕೆ ಪ್ರತಿಬಿಂಬಿಸುವ ಕೊಚ್ಚಿ (ಈಗಿನ ಕೊಚಿನ್), ಕೇರಳದ ಅತಿ ಜನಪ್ರಿಯ ಪ್ರವಾಸಿ ತಾಣ. ಭಾರತಕ್ಕೂ ಯಹೂದಿಗಳಿಗೂ ಬಲವಾದ ನಂಟಿದೆ. ಆದರೆ ಯಹೂದ್ಯರಿಗೆ ಕೊಚಿನ್ ಜತೆಗಿನ ಅಂಟು ತುಸು ಹೆಚ್ಚು! ಹಳೇ ಕೊಚಿನ್‌ನ ಬೀದಿ–ರಸ್ತೆಯಲ್ಲಿ ಯಹೂದಿ ಸಂಸ್ಕೃತಿಯ ಛಾಯೆ ದಟ್ಟವಾಗಿ ಕಾಣುತ್ತದೆ.

ಯಹೂದಿಗಳು ಕೊಚಿನ್‌ಗೆ ಯಾವಾಗ ಬಂದಿದ್ದು ಎಂಬ ಬಗ್ಗೆ ಸ್ಪಷ್ಟತೆಯಿಲ್ಲ. ಕ್ರಿ.ಪೂ. 1ನೇ